# ಪಂದ್ಯದಲ್ಲಿ ಸೋತ ರಾಜಕುಮಾರಿ

■ ಬಿ. ಎಸ್. ಮುಳ್ಳೂರ ಹಲಗತ್ತಿ



ವಿಜಯಕುಮಾರಿ ಆರ್.

ಒಂದು ರಾಜ್ಯದಲ್ಲಿ ಒಬ್ಬ ರಾಜಕುಮಾರಿ ಇದ್ದಳು. ಅವಳು ಓಟದಲ್ಲಿ ಭಾರಿ ವೇಗವಾಗಿ ಓಡುತ್ತಿದ್ದಳು. ಒಂದು ಬಾರಿ ರಾಜ್ಯದಲ್ಲಿ ಅವಳು ಡಂಗುರ ಸಾರಿಸಿದಳು. ಓಟದಲ್ಲಿ ತನ್ನೊಂದಿಗೆ ಓಡಿ ಯಾರು ಗೆಲ್ಲುತ್ತಾರೋ ಅವರನ್ನು ಮದುವೆಯಾಗುತ್ತೇನೆ ಎಂದು.

ಒಂದು ಸಲ ಒಬ್ಬ ರಾಜಕುಮಾರನು ಓಟದಲ್ಲಿ ಸೋತನು. ಹೀಗೆ 56 ರಾಜಕುಮಾರರು ಓಟದಲ್ಲಿ ಸೋತರು. ಒಬ್ಬ ರಾಜಕುಮಾರ ಒಂದು ಉಪಾಯವನ್ನು ಮಾಡಿದ. ಓಟದ ದಾರಿಯಲ್ಲಿ ಅಲ್ಲಲ್ಲಿ ಒಂದು ಚಿನ್ನದ ಇಟ್ಟಿಗೆಯನ್ನು ಇಟ್ಟನು. ಪಂದ್ಯ ಪ್ರಾರಂಭವಾಯಿತು. ರಾಜಕುಮಾರಿ ವೇಗವಾಗಿ ಓಡಿದಳು. ರಾಜಕುಮಾರ ನಿಧಾನವಾಗಿ ಓಡತೊಡಗಿದ. ರಾಜಕುಮಾರಿಗೆ ಚಿನ್ನದ ಇಟ್ಟಿಗೆ ಕಾಣಿಸಿತು. ಅವಳು ಓಡುವುದನ್ನು ನಿಲ್ಲಿಸಿ ಆ ಚಿನ್ನದ ಇಟ್ಟಿಗೆಯನ್ನು ತೆಗೆದುಕೊಂಡಳು. ಅಷ್ಟರಲ್ಲಿ ಆ ರಾಜಕುಮಾರ ಅವಳ ಹತ್ತಿರ ಬಂದು ಬಿಟ್ಟ. ಹೀಗೆಯೇ ದಾರಿಯುದ್ದಕ್ಕೂ ರಾಜಕುಮಾರಿ ಚಿನ್ನದ ಇಟ್ಟಿಗೆಗಳನ್ನು ಎತ್ತಿಕೊಳ್ಳಲು ನಿಲ್ಲುತ್ತಿದ್ದಂತೆ ರಾಜಕುಮಾರನು ಅವಳ ಸಮಾನವಾಗಿ ಓಡುತ್ತಿದ್ದನು. ಪಂದ್ಯದ ಗುರಿ ಹತ್ತಿರ ಬಂದಾಗ ರಾಜಕುಮಾರಿಗೆ ಇನ್ನೊಂದು ಚಿನ್ನದ ಇಟ್ಟಿಗೆ ಕಾಣಿಸಿತು. ಅದನ್ನು ಎತ್ತಿಕೊಳ್ಳಲು ಅವಳು ನಿಂತಾಗ ರಾಜಕುಮಾರನು ಅವಳನ್ನು ದಾಟಿ ಮುಂದೆ ಓಡಿ ಗುರಿ ಮುಟ್ಟಿದನು. ಹೀಗೆ ಪಂದ್ಯದಲ್ಲಿ ಗೆದ್ದು ರಾಜಕುಮಾರಿಯನ್ನು ಮದುವೆಯಾದನು.

ನೀತಿ: ಶಕ್ತಿಗಿಂತ ಯುಕ್ತಿ ಮೇಲು.

# ಚಂದಿರನಾಟ

■ ಕುಮಾರ ಚಲವಾದಿ ಹಾಸನ

ಹೊಳಪಿನ ಬೆಳಕು
ಚಂದಿರ ನಿನಗೆ
ಬಂದಿತು ಹೇಗೆ ಹೇಳುವೆಯಾ?

ಹಳದಿಯ ಬಣ್ಣ
ನಿನ್ನಯ ಮೈಯಿಗೆ
ಬಳಿದವರಾರು ಹೇಳುವೆಯಾ?

ಓಡುವೆ ನೀನು
ಮುಗಿಲಲಿ ದಿನವೂ
ಚಲಿಸುವೆ ಹೇಗೆ ಹೇಳುವೆಯಾ?

ನೀನೇ ಮೋಡವ ತಳ್ಳುವೆಯಾ?
ಮೋಡಕೆ ನೀನೇ ಹೆದರಿದೆಯಾ
ಈ ಪರಿ ಆಟವ ನನಗೆ ಕಲಿಸುವೆಯಾ?

ದಿನವೂ ಬೆಳೆಯುತ
ದೊಡ್ಡವನಾಗುವೆ
ಬೆಳೆಯುವ ರೀತಿಯ ಹೇಳುವೆಯಾ?

ಸೂರ್ಯನ ಬೆಳಕು ಬೆಳೆಯಲು ಬೇಕು
ನಿನ್ನಯ ಬೆಳಕು ಆಡಲು ಬೇಕು
ಇಬ್ಬರ ಕಾರ್ಯವ ತಿಳಿಸುವೆಯಾ? ■



ವಿಜಯಕುಮಾರಿ ಆರ್.